# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ

**ಮಂಜುನಾಥ ಎನ್. ಜಿ.**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

**DOI: https://doi.org/10.5281/zenodo.18699496**

## ABSTRACT:

ಸರ್ವರ ಸಮಾನತೆ ಕಾಪಾಡುವುದು ಇಂದಿನ ಜಗತ್ತಿನ ಬಹುದೊಡ್ಡ ಹೊಣೆಗಾರಿಕೆ. ನಾವೆಲ್ಲರೂ ಹೆಚ್ಚು ಹಣವಂತರಾಗಿ ಹೆಚ್ಚು ಹೆಚ್ಚು ಸುಖ ಸಂತೋಷಗಳನ್ನು ಅನುಭವಿಸಬೇಕೆಂಬ ಸಾರ್ವತ್ರಿಕ ಆಶಯ ಆಧುನಿಕ ಜಗತ್ತಿನ ಕೊಡುಗೆ. 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬ ಮಹಾನುಡಿ ಮನುಷ್ಯನ ಮನಸ್ಸಿನಲ್ಲಿ ಮೂಡಿ ಭಾಷೆಯಲ್ಲಿ ರೂಪಗೊಂಡಿದ್ದು ಶತಶತಮಾನಗಳ ಮಾನಸಿಕ ಮತ್ತು ಸಾಮಾಜಿಕ ವಿಕಾಸದ ಫಲ. ಆಧುನಿಕ ಜಗತ್ತಿನಲ್ಲಿ ಸಮಾನತೆಯ ಕೂಗು ಅತಿ ಹೆಚ್ಚಾಗಿ ಕೇಳಿಬರುತ್ತಿದ್ದರೂ, ಇಲ್ಲಿ ಭೇದಭಾವ ರಾರಾಜಿಸುತ್ತಿದೆ. ಈ ಸಮಾಜದಲ್ಲಿ ಎಷ್ಟೇ ಶಿಕ್ಷಣ, ತಾಂತ್ರಿಕ ಮೊದಲಾದ ಅಭಿವೃದ್ಧಿ ಕಾರ್ಯಗಳು ಘಟಿಸಿದರೂ ಇನ್ನೂ ಪುರುಷ ಮಹಿಳೆಯ ಸಮಾನತೆ ತನ್ನ ಗುರಿ ಮುಟ್ಟುವಲ್ಲಿ ಸಫಲವಾಗಿಲ್ಲವೆಂದೇ ಹೇಳಬಹುದು.

ಮಹಿಳಾ ಸಂವೇದನೆಯ ಕೂಗು ಇಂದು ನಿನ್ನೆಯದಲ್ಲ. ಶತಶತಮಾನಗಳ ಚರಿತ್ರೆಯುಳ್ಳ ಹೋರಾಟ ದಡ ಸೇರುವುದು ಇನ್ನೂ ಯಾವಾಗ? ಇದೊಂದು ಬಗೆಹರಿಯದ ಉತ್ತರ ಸಿಗದ ಪ್ರಶ್ನೆ. ತಾರತಮ್ಯದ ಕೂಪಮಂಡೂಕದಲ್ಲಿ ಸಿಲುಕಿ, ಒದ್ದಾಡುತ್ತಿರುವ ಮಹಿಳಾವರ್ಗ ಮಾನವೀಯ ನೆಲೆಗಟ್ಟಿಗೆ ಬಂದು ಸರ್ವಸಮಾನತೆಯ ಬಾಳ್ವೆ ನಡೆಸುವ ಜರೂರತ್ತು ಇಂದು ಅನಿವಾರ್ಯ. ಈ ನಿಟ್ಟಿನಲ್ಲಿ ಸಾಹಿತ್ಯದ ಸತತ ಪ್ರಯತ್ನದ ಫಲವಾಗಿ ಹುಟ್ಟಿದುದೇ ಈ 'ಸ್ತ್ರೀ ಸಂವೇದನೆ' ಎಂಬ ಸಾಹಿತ್ಯ ಸುಧಾರಣೆಯ ಮಂತ್ರ. ಸಾಹಿತ್ಯವೇನೋ ಈ ಮಹಿಳಾ ಸಂವೇದನೆಯ ನಿಟ್ಟಿನಲ್ಲಿ ಇಂದು ಕಾರ್ಯಪ್ರವೃತ್ತವಾಗಿದ್ದರೂ ಈ ಸಮಾನತೆ ಸಾಕಾರತೆ ಇನ್ನೂ ಗುರಿ ತಲುಪಿಲ್ಲ. ಈ ದಾರಿಯಲ್ಲಿ ಸಮಸ್ಯೆಗಳ ಸಾಕು ಬೇಕುಗಳೇ ಎದುರಾಗುತ್ತಿರುವುದು ವಿಷಾದನೀಯ ಸಂಗತಿ. ಏನೇ ಸಮಸ್ಯೆಗಳಿದ್ದರೂ ಎಲ್ಲವನ್ನೂ ಮೆಟ್ಟಿನಿಂತು ಪುರುಷ ಮಹಿಳಾ ಸಮಾನತೆಯನ್ನು ಸಾಧಿಸುವುದು ಮುಖ್ಯ. ಆಧುನಿಕೋತ್ತರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಪಕ್ಷಿನೋಟವೇ ಈ ಪುಟ್ಟ ಲೇಖನ.

## KEYWORDS:

ಮಹಿಳಾ ಸಂವೇದನೆ, ಆಧುನಿಕತೆ, ಮಹಿಳಾ ಸಬಲೀಕರಣ, ಸ್ತ್ರೀ ಸಂವೇದನೆ.

ಕೆಲವು ವ್ಯಕ್ತಿಗಳ, ಸಮುದಾಯಗಳ, ಧರ್ಮಗಳ ಏಳಿಗೆಯ ಪರಮೋದ್ದೇಶವುಳ್ಳ ಸಮಾಜದಲ್ಲಿ ತಮ್ಮ ತಮ್ಮ ಸ್ವಾರ್ಥದ ಅನುಕೂಲಕ್ಕಾಗಿ ಸಾಕಷ್ಟು ಸಿದ್ಧಾಂತಗಳು, ಧರ್ಮಗಳು ಜನ್ಮತಾಳಿದವು. ಇವುಗಳ ಬೆಳವಣಿಗೆ ಹಾದಿಯಲ್ಲಿ ಅನೇಕ ಸೈದ್ಧಾಂತಿಕ ಬದಲಾವಣೆಗಳು ಸಮಾಜದಲ್ಲಿ ಹರಡಲು ಪ್ರಾರಂಭಿಸಿದವು. ಹೀಗೆ ಹುಟ್ಟಿಕೊಂಡಂತಹ ವಿಚಾರಗಳನ್ನು ಗಮನಿಸಿದರೆ ಸುಖ-ದುಃಖಗಳ ಸಂಸಾರವೇ ಮಾಯೆಯೆಂದು ಕೆಲವರು, ಇವೆಲ್ಲವೂ ಕೊಳಕು ಹೀನವೆಂದು ಕೆಲವರು, ಪಾಪಕಾರ್ಯಗಳೆಂದು ಕೆಲವರು ಭಾವಿಸತೊಡಗಿದರು. ಮುಂದೆ ಈ ಅಭಿಪ್ರಾಯಗಳು ಬೆಳೆದು ಹೆಮ್ಮರವಾಗಿ ಶೋಷಣೆಯ ಹಂತವನ್ನು ತಲುಪಿದವು. ಹೀಗೆ ಗೊಡ್ಡು ಸಂಪ್ರದಾಯ ಸಿದ್ಧಾಂತಗಳ ಪಟ್ಟಭದ್ರ ಹಿತಾಸಕ್ತಿಯಿಂದ ಸಾಕಷ್ಟು ಮುಗ್ಧ ಜೀವಿಗಳು ಶೋಷಣೆಯ ಸೆರೆಮನೆಯೊಳಗೆ ಸಿಕ್ಕು ನಲುಗತೊಡಗಿದರು. ಹೀಗೆ

ಶತಶತಮಾನಗಳಿಂದ ನಡೆದಂತ ಶೋಷಣೆಗೆ ಒಳಗಾದ ಕೆಲವರಲ್ಲಿ ಕಾಲಕ್ರಮೇಣ ಎದೆಗಾರಿಕೆ ಹುಟ್ಟಿ ಯಜಮಾನ ಮೌಲ್ಯಗಳ ವಿರುದ್ಧ ಪ್ರಶ್ನೆ ಎತ್ತಿದರು. ಅತಿರೇಕವಾದಾಗ ದಂಗೆ ಎದ್ದರು, ಪರ್ಯಾಯವಾದಂತಹ ಕನಸುಗಳನ್ನು ಕಟ್ಟಿದರು. ಮುಂದೆ ಬಿಡುಗಡೆ ಹೋರಾಟದ ಕನಸು ಇಂತಹ ಜನರಲ್ಲಿ ಬೆಳೆಯುತ್ತಾ ಹೋಯಿತು. ಈ ರೀತಿಯ ಹೋರಾಟದ ದಾರಿ ಸವೆಸಿದಾಗ ಸಮಾಜವಾದದ ಪ್ರಜಾಪ್ರಭುತ್ವದ ಸರ್ವರ ಸರ್ವಾಂಗೀಣ ವಿಕಾಸದ ಮೂಲಮಂತ್ರ ಎಲ್ಲಡೆಯಲ್ಲೂ ಮೊಳಗತೊಡಗಿತು.

'ಭವತು ಸರ್ವ ಮಂಗಳಂ' ಎಂಬ ಆಶಯ ಎಲ್ಲರ ಮನದಲ್ಲಿ ಮೂಡಿತು. ಆದರೆ ಈ ಆಸೆ ಈಡೇರುವುದು ಅಷ್ಟು ಸುಲಭ ಸಾಧ್ಯದ ಮಾತಲ್ಲ. ಈ ಅಸಾಧ್ಯದ ಅನುಭವಕ್ಕೆ ಅಂದಿನ ಆಳುವ ವ್ಯಕ್ತಿಗಳು, ವರ್ಗಗಳ ಶಕ್ತಿಗಳೇ ಕಾರಣ. ಇವರೆಲ್ಲ ಉಂಡು ಕೊಬ್ಬಿದರೆ ಉಳಿದವರು ಇವರ ಕಪಿಮುಷ್ಟಿಯಲ್ಲಿ ಸಿಲುಕಿ ಸೊರಗಿದರು. ಈ ನಿಟ್ಟಿನಲ್ಲಿ ಅನೇಕ ಜಾಗೃತಿಯ ಜಾಥಾಗಳು ನಡೆದರೂ ಸಮಬಾಳಿನ ಆದರ್ಶ ಸಾಧ್ಯವಾಗುತ್ತಿಲ್ಲ. ಶ್ರೀಮಂತಿಕೆಯ ಜೀವನ ನಡೆಸಲು ಎಲ್ಲರಿಗೂ ಸಾಧ್ಯವಾಗುತ್ತಿಲ್ಲ. ಉನ್ನತ ಶಿಕ್ಷಣ, ವೈದ್ಯಕೀಯ ಮೊದಲಾದ ಸೌಲಭ್ಯಗಳನ್ನು ಪಡೆಯಲು ಎಲ್ಲರಿಗೂ ಸಾಧ್ಯವಾಗುತ್ತಿಲ್ಲ. ಇಂದು ಉಚಿತವಾಗಿ ದೊರೆಯುತ್ತಿರುವ ನೀರು, ಗಾಳಿ, ಹಣ್ಣು ಹಂಪಲುಗಳಿಗೂ ಬೆಲೆ ಕಟ್ಟಬೇಕಾದ ಪರಿಸ್ಥಿತಿ ಬಂದೊದಗಿದೆ. ವಸಾಹತು ಬಂಡವಾಳ ಆಧಾರಿತವಾದ ಸಮಾಜದಲ್ಲಿ ಸ್ಥಿತಿವಂತರು ಇತರರನ್ನು ಹಿಂಸಿಸಿ ಶೋಷಿಸಿ ಅಸಮಾನತೆಯೆಂಬ ಪಿಡುಗನ್ನು ಹುಟ್ಟುಹಾಕಿದರು. ಇಂದಿನ ದಿನಮಾನಗಳಲ್ಲಿ ಆರ್ಥಿಕ ಬಲಾಢ್ಯ ಕೇಂದ್ರಗಳು ಶೋಷಣೆಯ ವಿಧಾನವನ್ನು ಬದಲಾಯಿಸಿಕೊಂಡವೇ ಹೊರತು ಸಮ ಬಾಳಿನ ಸಾಕಾರದ ಸನಿಹವೂ ಸುಳಿಯಲಿಲ್ಲ.

ಜಗತ್ತು ಆಧುನಿಕಗೊಳ್ಳುತ್ತಿರುವ ಈ ದಿನಮಾನಗಳಲ್ಲಿ ಅಸಮಾನತೆ ಅಳಿಸಿ ಹೋಗುತ್ತದೆ ಎಂಬ ನಂಬಿಕೆ ಇಂದು ಹುಸಿಯಾಗುತ್ತದೆ. ಅಸಮಾನತೆಯ ಪದ್ಧತಿ ತನ್ನ ವಿಧಾನವನ್ನು ಬದಲಾಯಿಸಿಕೊಂಡಿದೆ ಹೊರತು ತನ್ನ ಮೂಲವನ್ನಲ್ಲ; ಅಸಮಾನತೆ ಮತ್ತಷ್ಟು ಹೊಸ ಹಾದಿಯಲ್ಲಿ ಜೀವಂತವಾಗಿ ಸಾಗುತ್ತಲಿದೆ. ಮಹಿಳೆಯರಂತೂ ಅಸಮಾನತೆಯ ಅನುಭವವು ತಮಗೆ ಬಳುವಳಿಯಾಗಿ ಬಂದ ಪೂರ್ವ ಸಂಪ್ರದಾಯವೆಂಬಂತೆಯೇ ಭಾವಿಸುತ್ತಿದ್ದಾರೆ. ಇನ್ನೂ ಪುರುಷರು ಅಡಿಯಾಳಾಗಿಯೇ ಬದುಕುವುದರಲ್ಲಿ ತೃಪ್ತಿ ಸಾರ್ಥಕತೆ ಪಡೆಯುತ್ತಿದ್ದಾರೆ. ಮಹಿಳೆಯರ ಈ ಅಸಹಾಯಕತೆ ಹಾಗೂ ಮುಗ್ಧತೆಯನ್ನು ಪುರುಷರು ತಮ್ಮ ಅಸ್ತ್ರ ಹಾಗೂ ಆಜನ್ಮಸಿದ್ಧ ಹಕ್ಕು ಎಂಬಂತೆಯೇ ಭಾವಿಸಿ ಬೆಳೆಸುತ್ತಿದ್ದಾರೆ.

ಇಂದಿನ ದಿನಮಾನಗಳಲ್ಲಿ ಸರ್ಕಾರವು ಸಾಕಷ್ಟು ಮಹಿಳಾ ಸಬಲೀಕರಣದ ಸಾಕಾರಕ್ಕಾಗಿ ಪ್ರಯತ್ನ ಪಡುತ್ತಿದ್ದರೂ, ಅನೇಕ ಕಾರಣಗಳಿಂದಾಗಿ ಸಂಪೂರ್ಣತೆ ಸಾಧ್ಯವಾಗುತ್ತಿಲ್ಲ. ಸರ್ಕಾರದ ಅನೇಕ ಬಜೆಟ್‌ಗಳು ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡುವಲ್ಲಿ ವಿಫಲವಾಗಿವೆ. ಒಂದು ವೇಳೆ ಸಬಲೀಕರಣ ಪ್ರಯೋಜನ ದೊರೆತರೂ ಅದು ಅತ್ಯಲ್ಪ ಎನ್ನಬಹುದು. ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರವು ಬಜೆಟ್‌ಗಳಲ್ಲಿ ಕೋಟಿ ಕೋಟಿ ಅನುದಾನಗಳನ್ನು ಮೀಸಲಾಗಿಡುತ್ತಿದೆ. ಗರ್ಭಿಣಿಯರಿಗೆ 26 ವಾರಗಳ ಹೆರಿಗೆ ರಜೆ, ಮಾತೃ ವಂದನಾ ಎಂಬ ಯೋಜನೆಯ ಹೆಸರಿನಲ್ಲಿ ಸಾಕಾರಗೊಳ್ಳುತ್ತಿದೆ. ಆದರೂ ಇದರ ಪ್ರಯೋಜನ ಅದೆಷ್ಟು ಪರಿಣಾಮಕಾರಿ ಎಂಬುದು ಸಂಶಯದ ವಿಷಯ. ಸರ್ಕಾರದ ಯೋಜನೆಗಳಲ್ಲಿ ಮಹಿಳಾ ಸಬಲೀಕರಣದ ವಿಷಯ ಗಮನಕ್ಕೆ ಬಂದಿಲ್ಲ ಅಥವಾ ಗಮ್ಯವೇ ಆಗಿಲ್ಲ. ಮಹಿಳೆಯರ ಕೌಶಲ್ಯ ಅಭಿವೃದ್ಧಿಯ ಗಮನವೇ ಇಲ್ಲ. ಉದ್ಯೋಗಸ್ಥ ಮಹಿಳೆಯ ಹಿತರಕ್ಷಣೆಗೆ ಕೂಡ ಯಾವ ಗಮನವನ್ನು ಹರಿಸಲಾಗುತ್ತಿಲ್ಲ.

ತಾರತಮ್ಯ ನಿವಾರಣೆ, ಹಣಕಾಸಿನ ಕೊರತೆ ನೀಗಿಸಲು, ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ನಿಯಂತ್ರಿಸಲು ಕಾನೂನುಗಳನ್ನು ಮಾಡಿದರು, ಅವು ಎಷ್ಟರಮಟ್ಟಿಗೆ ಪಾಲನೆಯಾಗುತ್ತಿವೆ ಎಂಬುದು ಯಕ್ಷ ಪ್ರಶ್ನೆ? ಇದಕ್ಕೆ ಪರಿಹಾರವೆಂದರೆ ಮಹಿಳಾ ವರ್ಗ ಹೆಚ್ಚು ಜಾಗೃತಗೊಳ್ಳುವುದು ಅವಶ್ಯಕ. ಶಿಕ್ಷಣದ ಸಹಾಯ ಸಹಕಾರದಿಂದ ಹೆಣ್ಣು ಸಮಾನತೆಯ ಸೌಧ ನಿರ್ಮಿಸಿಕೊಳ್ಳಬೇಕು. ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ಸುಧಾರಿಸುವ ದೃಷ್ಟಿಯಿಂದ ನಲವತ್ತು ವರ್ಷಗಳ ಹಿಂದೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್) ಯನ್ನು ಆಚರಣೆಗೆ ತರಲಾಯಿತು. ಇದಕ್ಕೆ ಅಂದು ಅಂತರರಾಷ್ಟ್ರೀಯ ಸಂಸ್ಥೆಗಳ ಬೆಂಬಲ ಕೂಡ ದೊರೆಯಿತು. ಇದರ ಜೊತೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ, ಸರ್ವ ಶಿಕ್ಷಣ ಅಭಿಯಾನ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ಇನ್ನು ಮುಂತಾದ ಯೋಜನೆಗಳು ಮಹಿಳೆಯರ ಸಬಲೀಕರಣದ ದೃಷ್ಟಿಯಿಂದ ಮಹತ್ವವಾದುದು. ಇಂತಹ ಯೋಜನೆಗಳು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು ಮತ್ತು ಇದಕ್ಕೆ ಹೆಚ್ಚಿನ ಹಣವನ್ನು ರಾಷ್ಟ್ರೀಯ ಆದಾಯದತ್ತ ನೀಡಬೇಕು ಎಂದು ನಾಗರಿಕ ಸಮಾಜಗಳು ಚಳುವಳಿ ಮೂಲಕ ಒತ್ತಾಯಿಸುತ್ತಾ ಬಂದಿವೆ. ಆದರೂ ಈ ಯೋಜನೆಗಳಿಗೆ ಸರ್ಕಾರವು ಸಂಪೂರ್ಣ ತೃಪ್ತಿಕರವಾದ ಹಣವನ್ನು ಯಾವತ್ತೂ ನೀಡಲಿಲ್ಲ.

ಬಡ ಮಹಿಳೆಯರು ಎದುರಿಸುತ್ತಿರುವ ಸವಾಲುಗಳನ್ನು ಉದಾರವಾಗಿ ಸಿದ್ಧಾಂತ ಹೇಳುವ ಅಭಿವೃದ್ಧಿ ಕೇವಲ ಆರ್ಥಿಕ ಅಂಶಗಳ ಸಬಲೀಕರಣಕ್ಕೆ (ಬಂಡವಾಳ, ಬಡ್ಡಿ, ಲಾಭ, ಉಳಿತಾಯ) ಮಾತ್ರ ಸಂಬಂಧಿಸಿದ ವಿಷಯವಾಗಿ ಪರಿಗಣಿಸಿದೆ. ಆ ಮೂಲಕ ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ಬಂಧಿಸಿ ನಿಯಂತ್ರಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರವೃತ್ತಿಗಳು ಅಭಿವೃದ್ಧಿ ಹೆಸರಿನಲ್ಲಿ ರೂಪ ತಾಳುತ್ತವೆ. ಇದು ನಮ್ಮ ಸಮಕಾಲೀನ ಅಭಿವೃದ್ಧಿ ಮಹಿಳೆಯರನ್ನು ನೋಡುವ ದೃಷ್ಟಿಕೋನ. ಇದು ಮುಕ್ತ ಮಾರುಕಟ್ಟೆಯನ್ನು ನಿಯಂತ್ರಣ ಮಾಡುವ ಬಹುರಾಷ್ಟ್ರೀಯ ಬಂಡವಾಳಶಾಹಿ ವರ್ಗದ ಪ್ರಮುಖ ಅಜೆಂಡಾ ಕೂಡ. ಇಂತಹ ಸಮಯದಲ್ಲಿ ಸರ್ಕಾರಗಳು ಮಹಿಳೆಯರ ಅಭಿವೃದ್ಧಿ ನೀತಿ ಮತ್ತು ಕಾರ್ಯಕ್ರಮಗಳಿಗೆ ನೀಡಬೇಕಾದ ರಚನಾತ್ಮಕ ಬೆಂಬಲ ಇಲ್ಲವಾಗಿದೆ. ಹೀಗಾಗಿ ನಾವು ಅನುಸರಿಸುತ್ತಿರುವ ಅಭಿವೃದ್ಧಿ ನೀತಿಗಳಿಂದ ಮಹಿಳೆಯರೂ ಮತ್ತು ಹೆಣ್ಣು ಮಕ್ಕಳಿಗೆ ಸಮಾನತೆಯ ನೆಲೆಯಲ್ಲಿ ನ್ಯಾಯ, ಆಸ್ತಿಯ ಹಕ್ಕು, ಸಮಾನ ಅವಕಾಶ, ಸಮಾನ ವೇತನ, ಗೌರವಯುತ ಜೀವನ ಮತ್ತು ಅಧಿಕಾರ ಭವ್ಯ ಭಾರತದಲ್ಲಿ ದೊರಕುವುದು ಕಷ್ಟ. ಯಾಕೆಂದರೆ ನಾವು ಅನುಸರಿಸುತ್ತಿರುವ ಅಭಿವೃದ್ಧಿ ಸಬಲೀಕರಣಕ್ಕೆ ಮಹಿಳೆಯರು ಎದುರಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ನಿವಾರಿಸುವ ಶಕ್ತಿಯೇ ಇಲ್ಲ.

ಮಹಿಳೆಯರು ಇನ್ನು ಅಶಕ್ತರಿರುವುದರಿಂದಲೇ ಮಹಿಳಾ ಸಶಕ್ತಿಕರಣ ಎಂಬ ವಿಷಯ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಅವರು ಸಶಕ್ತರಾಗುವ ತನಕ ಮುಂದುವರಿಸುತ್ತಲೇ ಇರುತ್ತದೆ. ಮಹಿಳೆಯರನ್ನು ಇನ್ನೂ ಒಂದು ಭೋಗದ ವಸ್ತುವಾಗಿ ಉಪಯೋಗಿಸಿ ಸಮಾಜದ ಮುಖ್ಯ ವಾಹಿನಿಯಿಂದ ಅವಳನ್ನು ದೂರ ಇಟ್ಟು ಕಡೆಗಣಿಸಲಾಗುತ್ತಿರುವುದರಿಂದ ಪುರುಷ ಪ್ರಧಾನವಾದ ಈ ಸಮಾಜ ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ, ಸ್ವಯಂ ಆಡಳಿತವನ್ನು ನಿರಾಕರಿಸುತ್ತಾ ಬಂದಿದೆ. ಈ ಲಿಂಗ ತಾರತಮ್ಯ ಹೆಣ್ಣು ಮಗುವಿನ ಜನನಕ್ಕೆ ಮುಂಚೆಯೇ ಪ್ರಾರಂಭವಾಗಿ ಅವಳ ಹೆಣ್ಣುತನದ ಜೀವನದುದ್ದಕ್ಕೂ ಅನಾದಿ ಕಾಲದಿಂದಲೂ ಮಹಿಳೆ ಪರಿಶ್ರಮ ಪಡುತ್ತಾ ಪುರುಷನಿಗೆ

ಸಮಾನವಾಗಿ ದುಡಿಯುತ್ತಿದ್ದಾಳೆ. ನಮ್ಮ ರಾಷ್ಟ್ರವನ್ನು ಮಾತೆಗೆ ಹೋಲಿಸಿ 'ಭಾರತ ಮಾತೆ' ಎಂದು ಕರೆಯಲಾಗುತ್ತದೆ. ನಮ್ಮ ಜೀವನಾಧಾರಕ್ಕೆ ಮೂಲವಾದ ಭೂಮಿಯನ್ನು 'ಭೂಮಿತಾಯಿ' ಎಂಬುದಾಗಿ, ಜೀವಜಲಗಳನ್ನು ಕೂಡ 'ಗಂಗಾಮಾತೆ' ಎಂಬುದಾಗಿ ಹೆಣ್ಣಿಗೆ ಹೋಲಿಸಿ ಪೂಜಿಸಲಾಗುತ್ತಿದೆ. ಆದರೆ ಮಹಿಳೆಯ ವಿಚಾರಕ್ಕೆ ಬಂದಾಗ ಅದೇನೋ ತಾತ್ಸಾರ, ತಾರತಮ್ಯ ಭಾವನೆ ಹಾಗೆಯೇ ಉಳಿದುಕೊಂಡು ಬಂದಿದೆ. ಶ್ರೀ ನಮೇನ ಡಿ. ಬಿವಿಯರ್ ರವರ ಪ್ರಕಾರ :- "ಮಹಿಳೆಯಿಲ್ಲದ ಜೀವನವೂ ಅಪೂರ್ಣವಿದ್ದಾಗಲೂ ಕೂಡ ಮಹಿಳೆಯರನ್ನು ಜೀವನದ ಇನ್ನೊಂದು ಅರ್ಧ ಎಂದು ಯಾವಾಗಲೂ ಪರಿಗಣಿಸಿಲ್ಲ" ಇದು ಸತ್ಯಪೂರ್ಣವಾದ ವಿಚಾರ. ಮಹಿಳೆಯರ ಸಬಲೀಕರಣಕ್ಕಾಗಿ ಸಾಕಷ್ಟು ಮಹನೀಯರ ಹೋರಾಟ ನಡೆಯುತ್ತಲೇ ಬಂದಿದೆ. ಪ್ರಮುಖವಾದವರೆಂದರೆ ಬುದ್ಧ, ಆದಿಶಂಕರಾಚಾರ್ಯ, ಬಸವಣ್ಣ, ರಾಜಾರಾಮ್ ಮೋಹನರಾಯ್, ಮಹಾತ್ಮ ಗಾಂಧಿ, ನೆಹರು ಮುಂತಾದವರು. ಅಲ್ಲದೆ ಬ್ರಿಟಿಷರು ಕೂಡ ಮಹಿಳಾ ಸಬಲೀಕರಣದ ಕುರಿತು ಜಾಗೃತಿ ಮೂಡಿಸಿದರು. ಆದರೂ ಸಬಲೀಕರಣ ಇನ್ನೂ ಸಾಧ್ಯವೇ ಆಗುತ್ತಿಲ್ಲ. ದಿನೇ ದಿನೇ ಸಾವಿರಾರು ಹೆಣ್ಣು ಮಕ್ಕಳ ಶೋಷಣೆ ಪ್ರಮಾಣ, ಮಹಿಳಾ ಆಯೋಗ (NCW) ಮತ್ತು ಮಹಿಳಾ ಹಕ್ಕು ಆಯೋಗದ ಪ್ರಕಾರ ಅಪರಾಧಗಳ ಪ್ರಮಾಣ ಹೆಚ್ಚುತ್ತಲೇ ಇದೆ.

ಮಹಿಳಾ ಸಬಲೀಕರಣ ಹಾಗೂ ಸ್ತ್ರೀ ಸಂವೇದನೆ ಕುರಿತು ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಸಾಹಿತ್ಯ ಆರಂಭದಿಂದಲೂ ಸ್ತ್ರೀ ಪರವಾದ ಕೂಗುಗಳು ಸಾಹಿತ್ಯದಲ್ಲಿ ಪ್ರತಿಧ್ವನಿಸಿರುವುದನ್ನು ನಾವು ಕಾಣಬಹುದಾಗಿದೆ. ಸಾಹಿತ್ಯದ ಎಲ್ಲಾ ಕಾಲಘಟ್ಟಗಳಲ್ಲಿಯೂ ಅನೇಕ ಸಂವೇದನೆಯ ಬರಹಗಾರರು ಜನಿಸಿ ಮಹಿಳೆಯ ನೋವು ನಲಿವುಗಳಿಗೆ ಸಾಹಿತ್ಯದ ಮೂಲಕ ಸಾಂತ್ವನ ಹೇಳುವ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಈ ನಿಟ್ಟಿನಲ್ಲಿ ಆಧುನಿಕ ಕಾಲದ ಸಾಹಿತ್ಯವನ್ನು ಗಮನಿಸುವುದಾದರೆ:

ಆಧುನಿಕ ಕನ್ನಡ ಕಾವ್ಯದಲ್ಲಿ ಸ್ತ್ರೀ ಸಂವೇದನೆ ಪ್ರಮುಖ ಸಾಹಿತ್ಯಕ ಧೋರಣೆಯಾಗಿ ಬೆಳೆಯಲಾಗಿದೆ. ಮಹಿಳೆಯ ಅಂತರಂಗದ ಭಾವನೆಗಳು, ಸಾಮಾಜಿಕ ಅನ್ಯಾಯ, ಲಿಂಗ ಅಸಮಾನತೆ, ಆತ್ಮಗುರುತು, ದೇಹ–ಮನಸ್ಸಿನ ಅನುಭವಗಳು, ಸ್ವಾತಂತ್ರ್ಯದ ಹಂಬಲ ಇತ್ಯಾದಿ ವಿಷಯಗಳು ಆಧುನಿಕ ಕವಿತೆಗಳ ಕೇಂದ್ರವಾಗಿವೆ.

**ಆಧುನಿಕೋತ್ತರ ಸಾಹಿತ್ಯದ ಸ್ತ್ರೀ ಸಂವೇದನೆಯ ಪ್ರಮುಖ ಲಕ್ಷಣಗಳು:**

- ಮಹಿಳೆಯ ಅಂತರಂಗದ ಭಾವನೆಗಳ ಅಭಿವ್ಯಕ್ತಿ
- ಪಿತೃತ್ವ ವ್ಯವಸ್ಥೆಯ ವಿಮರ್ಶೆ
- ಗೃಹಜೀವನದ ಒತ್ತಡ ಮತ್ತು ಬಂಧನ
- ದೇಹ ಮತ್ತು ಮನಸ್ಸಿನ ಅನುಭವಗಳ ರಾಜಕೀಯ
- ಆತ್ಮಗುರುತು ಮತ್ತು ಸ್ವಅಸ್ತಿತ್ವದ ಹುಡುಕಾಟ
- ಮೌನದಲ್ಲಿರುವ ನೋವು ಮತ್ತು ಪ್ರತಿರೋಧ
- ಸ್ವಾತಂತ್ರ್ಯ ಮತ್ತು ಸಮಾನತೆಯ ಆಶಯ

**ಆಧುನಿಕ ಕನ್ನಡದಲ್ಲಿ ಸ್ತ್ರೀ ಸಂವೇದನೆ ವ್ಯಕ್ತವಾಗುವ ಪ್ರಮುಖ ಕವಯಿತ್ರಿಯರ ಕೆಲವು ಕವಿತೆಗಳ ಸಾಲುಗಳು ಹಾಗೂ ಅವುಗಳ ಸಂವೇದನಾತ್ಮಕ ಅರ್ಥ ಗಮನಿಸೋಣ:**

1. ವೈದೇಹಿ: "ಮನೆಯೊಳಗಿನ ನನ್ನ ಲೋಕ ಸಣ್ಣದಾದರೂ/ ನನ್ನ ಕನಸುಗಳ ಆಕಾಶ ಅಷ್ಟು ಸಣ್ಣದಲ್ಲ."[1] ಗೃಹಜೀವನದ ಮಿತಿಗಳ ನಡುವೆಯೂ ಮಹಿಳೆಯ ಒಳಗಿನ

ಸ್ವಾತಂತ್ರ್ಯದ ಹಂಬಲವನ್ನು ಈ ಮೇಲಿನ ಕವಿತೆಯ ಸಾಲುಗಳಲ್ಲಿ ಗಮನಿಸಬಹುದು. "ಗೊಂಬೆಯ ಮನೆ" ಕವಿತೆಯಲ್ಲಿ "ನಗುವ ಗೊಂಬೆಯಾಗಿ ಬದುಕಿದ ದಿನಗಳು/ನನ್ನ ಮೌನದೊಳಗೆ ಅಳುತ್ತಿವೆ."[2] ಮಹಿಳೆಯನ್ನು ವಸ್ತುವಾಗಿ ಕಾಣುವ ಸಮಾಜದ ವಿಮರ್ಶೆ ಈ ಸಾಲುಗಳಲ್ಲಿ ಕಂಡುಬರುತ್ತದೆ. "ಮನೆಯ ಕೆಲಸಗಳ ನಡುವೆ/ನನ್ನ ಕನಸುಗಳನ್ನು ಮರೆತ ದಿನಗಳು."[3] ಈ ಸಾಲು ಗೃಹಬಂಧನ ಮತ್ತು ಆತ್ಮನಷ್ಟವನ್ನು ಸಾರಿ ಹೇಳುತ್ತವೆ.

2. ವಿಜಯಾ ದಬ್ಬೆ: "ನನ್ನ ಹೆಸರನ್ನು ನೀವು ಬದಲಿಸಿದರೂ/ನನ್ನ ಅಸ್ತಿತ್ವವನ್ನು ಬದಲಿಸಲಾರಿರಿ."[4] ಈ ಕವಿತೆಯಲ್ಲಿ ಪಿತೃತ್ವದ ವಿರುದ್ಧ ಮಹಿಳೆಯ ಆತ್ಮಗುರುತು ಮತ್ತು ಪ್ರತಿರೋಧದ ನೆಲೆಗಳು ಕಂಡುಬರುತ್ತದೆ. "ಮೌನವಾಗಿರುವುದು ನನ್ನ ಸ್ವಭಾವವಲ್ಲ/ಮಾತನಾಡಲು ಅವಕಾಶ ಇರಲಿಲ್ಲ."[5] ಇಲ್ಲಿ ಸಾಮಾಜಿಕ ದಮನ ಮತ್ತು ಒಳಗಣ್ಣಿನ ಪ್ರತಿರೋಧವನ್ನು ಕಾಣಬಹುದು. "ನಾನು ಹೆಣ್ಣು—ಕರುಣೆಗೆ ಪಾತ್ರಳಲ್ಲ/ ಹೋರಾಟಕ್ಕೆ ಹುಟ್ಟಿದವಳು."[6] ಮಹಿಳೆಯ ಶಕ್ತಿ ಮತ್ತು ಸಬಲೀಕರಣ ಕುರಿತಾದ ಮನಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

3. ಮಮತಾ ಸಾಗರ್: "ನನ್ನ ದೇಹದ ಮೇಲೆ ನಿಮ್ಮ ನಿಯಮಗಳು/ಆದರೆ ನನ್ನ ಮನಸ್ಸು ನನ್ನದೇ."[7] ಇಲ್ಲಿ ದೇಹ ರಾಜಕೀಯ ಮತ್ತು ಮಹಿಳೆಯ ಸ್ವಾಮ್ಯಬೋಧ ಮೊದಲಾದ ವಿಷಯಗಳನ್ನು ಕುರಿತು ಹಕ್ಕೊತ್ತಾಯದ ನೆಲೆಗಳನ್ನು ಹೇಳುತ್ತಾರೆ. "ಕನ್ನಡಿಯಲ್ಲಿ ಕಾಣುವುದು ಮುಖವಲ್ಲ/ ಪ್ರಶ್ನೆಗಳೊಂದಿಗೆ ನಿಂತಿರುವ ನಾನು."[8] ಈ ಸಾಲುಗಳಲ್ಲಿ ಆತ್ಮ ಪರಿಚಯದ ಹುಡುಕಾಟವನ್ನು ಕಾಣಬಹುದು. "ನನ್ನ ಕಥೆಯನ್ನು ನಾನು ಬರೆಯುವವರೆಗೆ / ಅದು ಸಂಪೂರ್ಣವಾಗುವುದಿಲ್ಲ"[9] ಆತ್ಮನಿರ್ಣಯ ಮತ್ತು ಸ್ವಾವಲಂಬನೆಯನ್ನು ಸಾರಿ ಹೇಳುತ್ತದೆ.

ಈ ರೀತಿಯಾಗಿ ಸ್ತ್ರೀ ಸಂವೇದನೆಯ ಕುರಿತು ಪ್ರಪಂಚದಾದ್ಯಂತ ಅಪಾರ ಸಾಹಿತ್ಯ ಮಹಿಳೆಯರನ್ನು ಜಾಗೃತಿಗೊಳಿಸುವ ನಿರಂತರ ಪ್ರಯತ್ನವನ್ನು ಮಾಡುತ್ತಲೇ ಇದೆ. ಕನ್ನಡ ಸಾಹಿತ್ಯದ ಪ್ರತಿಯೊಂದು ಕಾಲಘಟ್ಟದಲ್ಲೂ ಸ್ತ್ರೀವಾದಿ ಸಂವೇದನೆ ಸದಾ ಮಿಡಿಯುತ್ತಲೇ ಇದೆ. ಆದರೆ ಇಂದೆಂದಿಗಿಂತಲೂ ಆಧುನಿಕೋತ್ತರ ಕಾಲಘಟ್ಟದ ಕನ್ನಡ ಸಾಹಿತ್ಯದಲ್ಲಿ ಸ್ವಲ್ಪ ಹೆಚ್ಚಿನ ಮಟ್ಟದ ಸಂವೇದನೆಯನ್ನು ನಾವು ಗಮನಿಸಬಹುದು. ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆಯ ವಿಷಯ ವ್ಯಾಪ್ತಿ ಬಹಳ ದೊಡ್ಡದಾಗಿದ್ದು ಅದರ ಮೇಲುನೋಟ ಅಥವಾ ಪಕ್ಷಿ ನೋಟವನ್ನು ಮಾತ್ರ ತೀರ ಸಂಕ್ಷಿಪ್ತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ಉಪಸಂಹಾರ:**

ಆಧುನಿಕ ಕನ್ನಡ ಕಾವ್ಯದಲ್ಲಿ ಸ್ತ್ರೀ ಸಂವೇದನೆ ಮಹಿಳೆಯ ಬದುಕಿನ ವಾಸ್ತವಿಕ ಅನುಭವಗಳನ್ನು ಕೇಂದ್ರವಾಗಿಸಿಕೊಂಡಿದೆ. ಈ ಕವಿತೆಗಳು ಮಹಿಳೆಯನ್ನು ಕೇವಲ ಭಾವನಾತ್ಮಕ ವ್ಯಕ್ತಿಯಾಗಿ ಅಲ್ಲ, ಪ್ರಶ್ನಿಸುವ, ಪ್ರತಿರೋಧಿಸುವ ಮತ್ತು ಸ್ವತಂತ್ರ ಅಸ್ತಿತ್ವವನ್ನು ನಿರ್ಮಿಸುವ ವ್ಯಕ್ತಿತ್ವವಾಗಿ ಚಿತ್ರಿಸುತ್ತವೆ. ಇದರಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗೆ ಬಲವಾದ ಆಧಾರ ಸಿಕ್ಕಿದೆ.

ಶತಶತಮಾನಗಳಿಂದಲೂ ಸ್ತ್ರೀ ಸಂವೇದನೆಯ ಹೋರಾಟ ನಡೆಯುತ್ತಲೇ ಇದ್ದರೂ ಪರಿಪೂರ್ಣತೆ ಸಾಧಿಸಲಾಗದ್ದಕ್ಕೆ ಎಷ್ಟೋ ವೇಳೆ ಮಹಿಳೆಯರೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಹಾಗಾಗಿ ಮಹಿಳೆಯರು ಹೆಚ್ಚು ಹೆಚ್ಚು ಶಿಕ್ಷಿತರಾಗಿ ಪುರುಷನ ಸರಿಸಮಾನ

ಉದ್ಯೋಗಸ್ಥರಾಗಿ ಬೆಳೆದು ತಮ್ಮ ಸಬಲೀಕರಣದ ಕನಸನ್ನು ನನಸು ಮಾಡಿಕೊಳ್ಳಬೇಕಾದ ಈ ನಿಟ್ಟಿನಲ್ಲಿ ಇಡೀ ಸ್ತ್ರೀ ಸಮುದಾಯವೇ ಜಾಗೃತರಾಗಿ ತಮ್ಮ ಹಕ್ಕು ಬಾಧ್ಯತೆಗಳನ್ನು ಅರಿತು ಸಮಾನತೆ ಸಾಕಾರವನ್ನು ಸಾಧಿಸಬೇಕಾಗಿದೆ.

**ಕೊನೆ ಟಿಪ್ಪಣಿಗಳು:**

1. ವೈದೇಹಿ, ವೈದೇಹಿ ಕವಿತೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, 2008, ಪು. 32–35.
2. ವೈದೇಹಿ, "ಗೊಂಬೆಯ ಮನೆ", ವೈದೇಹಿ ಕಥೆಗಳು, ಅಕ್ಷರ ಪ್ರಕಾಶನ, 2005, ಪು. 78–85.
3. ವೈದೇಹಿ, ಸಂಪೂರ್ಣ ಕೃತಿಗಳು –ಭಾಗ 2, ಪು. 110–115.
4. ವಿಜಯಾ ದಬ್ಬೆ, ನೀರಿನ ದಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001, ಪು. 14–18.
5. ವಿಜಯಾ ದಬ್ಬೆ, ಸ್ತ್ರೀವಾದ ಮತ್ತು ಸಾಹಿತ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 1995, ಪು. 45–52.
6. ವಿಜಯಾ ದಬ್ಬೆ, ಕವಿತೆಗಳು, ಅಭಿನವ ಪ್ರಕಾಶನ, 2004, ಪು. 60–66.
7. ಮಮತಾ ಸಾಗರ್, ಕಾವ್ಯ ಸಂಪುಟ, ಅಕ್ಷರ ಪ್ರಕಾಶನ, 2010, ಪು. 22–28.
8. ಮಮತಾ ಸಾಗರ್, ನದಿಯ ನೀರಿನ ತಿರುವು, 2005, ಪು. 40–46.
9. ಮಮತಾ ಸಾಗರ್, Selections of Mamta Sagar (Poems), ಪು. 55–60.

**ಪರಾಮರ್ಶನ ಗ್ರಂಥಗಳು:**

1. ವೈದೇಹಿ, (2007), ಕಥೆಗಳು ಮತ್ತು ಕವಿತೆಗಳು, ಬೆಂಗಳೂರು: ಅಂಕಿತ ಪುಸ್ತಕ.
2. ತೇಜಸ್ವಿನಿ ನಿರಂಜನ, (2001), ಸ್ತ್ರೀವಾದ ಮತ್ತು ಸಾಹಿತ್ಯ, ಹೆಗ್ಗೋಡು: ಅಕ್ಷರ ಪ್ರಕಾಶನ.
3. ಶಿವಪ್ರಕಾಶ ಎಚ್.ಎಸ್. (ಸಂ), (1998), ಆಧುನಿಕ ಕನ್ನಡ ಸಾಹಿತ್ಯ ಚಳುವಳಿಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ಭಗವಾನ್ ಕೆ.ಎಸ್., (2004), ಸ್ತ್ರೀವಾದ: ಪರಿಕಲ್ಪನೆ ಮತ್ತು ಚಿಂತನೆ, ಮೈಸೂರು: ಅಭಿರುಚಿ ಪ್ರಕಾಶನ.
5. ಶಶಿಕಲಾ ವೀರಯ್ಯ, (2003), ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
6. ವಸಂತಕುಮಾರಿ, (2006), ಆಧುನಿಕ ಕನ್ನಡ ಮಹಿಳಾ ಬರಹ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್.
7. ವಿಜಯಾ ದಬ್ಬೆ, (2002), ಸ್ತ್ರೀವಾದದ ನೋಟಗಳು, ಹೆಗ್ಗೋಡು: ಅಕ್ಷರ ಪ್ರಕಾಶನ.
8. ನಾಗವೇಣಿ, (2010), ಆಧುನಿಕ ಕನ್ನಡ ಮಹಿಳಾ ಕಾವ್ಯ ಅಧ್ಯಯನ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.